KATK010033472020

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ವಿಶೇಷ ಮೊಕದ್ದಮೆ.205/2020**

ಪ್ರಾ.ಸಾ. ಃ **1**

ದೋ.ಸಾ. ಃ **3**

ದಿ.**5.6.2023**

ಹೆಸರು ಃ ಚಂದ್ರಕಾತ್ ಎಲ್.

ತಂದೆಯ ಹೆಸರು ಃ ಲಂಕೆ ಹನುಮಯ್ಯ

ವಯಸ್ಸು ಃ **26** ವರ್ಷ

ಉದ್ಯೋಗ ಃ ಪ್ರಥಮ ದರ್ಜೆ ಸಹಾಯಕ, ತಾಲ್ಲೂಕು ಕಚೇರಿ, ತುಮಕೂರು

ವಾಸಸ್ಥಳ ಃ ಹನುಮಂತಪುರ, ತುಮಕೂರು

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. ದಿ.31.5.2018 ರಿಂದ ನಾನು ತುಮಕೂರಿನ ತಾಲ್ಲೂಕು ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.
2. ದಿ.25.6.2020 ರಂದು ಸುಮಾರು ಸಂಜೆ 5 ಗಂಟೆಗೆ ಚಾ.ಸಾ.2 ಮೋಹನ್ ಕುಮಾರ್ ತಹಸೀಲ್ದಾರ್ ರವರು ಪಂಚರಾಗಿ ಸಹಕರಿಸಲು ಇಬ್ಬರು ಸರ್ಕಾರಿ ನೌಕರರ ಅವಶ್ಯಕತೆ ಇದೆ ಎಂದು ಗ್ರಾಮಾಂತರ ಪೋಲೀಸ್ ಠಾಣೆಯಿಂದ ಮನವಿ ಬಂದಿದೆ, ಆದ್ದರಿಂದ ನೀವು ಮತ್ತು ಚಾ.ಸಾ.4 ಚೇತನ್ ಶಿವು ಪಂಚರಾಗಿ ಸಹಕರಿಸಿ ಎಂದು ತಿಳಿಸಿದಾಗ ಅದಕ್ಕೆ ನಾವು ಒಪ್ಪಿಕೊಂಡೆವು. ಆ ಪ್ರಕಾರವಾಗಿ ಚಾ.ಸಾ.2 ನನ್ನನ್ನು ಮತ್ತು ಚಾ.ಸಾ. 4 ರವರನ್ನು ನಮ್ಮ ಇಲಾಖಾ ಜೀಪಿನಲ್ಲಿ ಕರೆದುಕೊಂಡು ಕೋರಾ ಹೋಬಳಿಯ ಅಹೋಬಲ ಅಗ್ರಹಾರಕ್ಕೆ ಭೇಟಿ ಕೊಟ್ಟರು. ಆಗ ಸಂಜೆ 6.15 ಆಗಿತ್ತು, ಆಗ ಇನ್ನೂ ಮುಸ್ಸಂಜೆ ಇತ್ತು. ನಮ್ಮ ವಾಹನದ ಜೊತೆ ತುಮಕೂರು ಗ್ರಾಮಾಂತರ ಪೋಲೀಸ್ ಠಾಣೆಯ ಟಾಟಾ ಸುಮೋ

ಜೀಪ್ ಸಹ ನಮ್ಮ ಮುಂದೆ ಹೋಗುತ್ತಿತ್ತು. ಅಲ್ಲಿ ನಾವು ಸೀದಾ ಆರೋಪಿತನ ಮನೆಯ ಬಳಿ ಹೋಗಿ ಎರಡು ವಾಹನಗಳನ್ನು ನಿಲ್ಲಿಸಿದೆವು. ಅಲ್ಲಿ ಆರೋಪಿತನಿಗೆ ಸೇರಿದ ತೋಟವನ್ನು ದಾಟಿಕೊಂಡು ಆರೋಪಿತನ ಮನೆಯ ಮುಂದೆ ಹೋದೆವು. ಅಲ್ಲಿ ಆರೋಪಿತ ಇದ್ದನು ಮತ್ತು ಆತನ ಕೈಯಲ್ಲಿ ಒಂದು ಚೀಲವಿತ್ತು. ಆಗ ತನಿಖಾಧಿಕಾರಿ ಆರೋಪಿತನಿಗೆ ಆತನ ಬಳಿ ಇದ್ದ ಚೀಲವನ್ನು ತೆರೆಯಲು ಹೇಳಿದಾಗ ಅದನ್ನು ಆತ ತೆರೆದನು. ಅದರಲ್ಲಿ 5 ಗಿಡಗಳಿದ್ದವು. ಆಗ ತನಿಖಾಧಿಕಾರಿ ಸದರಿ ಗಿಡಗಳಿಂದ ಒಂದೆರಡು ಎಲೆ ಕಿತ್ತು ಕೈಯಲ್ಲಿ ಉಜ್ಜಿ ನೋಡಿದಾಗ ಅದರಿಂದ ಒಂದು ರೀತಿಯ ಘಾಟು ವಾಸನೆ ಬಂತು. ಆದ್ದರಿಂದ ಅವು ಗಾಂಜಾ ಗಿಡಗಳೆಂದು ತಿಳಿಯಿತು. ಪ್ರತ್ಯೇಕವಾಗಿ ಆ 5 ಗಿಡಗಳ ಎತ್ತರ, ಉದ್ದ ಮತ್ತು ಅಗಲಗಳನ್ನು ಅಳತೆ ಮಾಡಿದರು. ಸದರಿ ಗಿಡಗಳನ್ನು ಪ್ರತ್ಯೇಕವಾಗಿ ತೂಕ ಮಾಡಿ, ಅವುಗಳ ಎತ್ತರ ಮತ್ತು ಪ್ರತ್ಯೇಕ ಅಳತೆಯನ್ನು ಪಂಚನಾಮೆಯಲ್ಲಿ ವಿವರವಾಗಿ ಬರೆದಿರುತ್ತಾರೆ. ಸದರಿ 5 ಗಿಡಗಳ ಒಟ್ಟು ತೂಕ 3 ಕೆಜಿ 900 ಗ್ರಾಂ ಇತ್ತು ಹಾಗೂ ಅವುಗಳನ್ನು ತೆಗೆದುಕೊಂಡು ಹೋಗುತ್ತಿದ್ದ ಚೀಲದ ತೂಕ 300 ಗ್ರಾಂ ಇತ್ತು. ಅದು ಗಾಂಜಾ ಎಂದು ದೃಢಪಟ್ಟ ಕಾರಣ ತನಿಖಾಧಿಕಾರಿ ಅವುಗಳನ್ನು ವಶಪಡಿಸಿಕೊಂಡು ಪ್ರತ್ಯೇಕವಾದ 5 ಬಿಳಿ ಬಟ್ಟೆ ಚೀಲಗಳಲ್ಲಿ ಹಾಕಿ ಬಾಯಿ ಹೊಲೆದು 'ಎಸ್' ಎಂಬ ಇಂಗ್ಲೀಷ್ ಅಕ್ಷರದಿಂದ ಮೊಹರು ಮಾಡಿ, ಅವುಗಳ ಮೇಲೆ ನಮ್ಮ ಸಹಿ ಇರುವ ಚೀಟಿಗಳನ್ನು ಅಂಟಿಸಿದರು.

3. ಅಲ್ಲಿಂದ ಆರೋಪಿತ ಸದರಿ ಸೊಪ್ಪು ಇದ್ದ ಗಿಡ ಬೆಳೆದ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿ ಅಲ್ಲಿಂದ ಸುಮಾರು 50 ಮೀಟರ್ ದೂರದ ಸ್ಥಳಕ್ಕೆ ತೋಟದ ಬದುವಿನ ಮೂಲಕ ಕರೆದೊಯ್ದು ತೋರಿಸಿದನು. ಸದರಿ ಸ್ಥಳ ಆರೋಪಿತನ ಮನೆಯಿಂದ ಸುಮಾರು 75 ಮೀ ದೂರದಲ್ಲಿ ಇತ್ತು. ಅಲ್ಲಿ ನಾವು ಹೋಗಿ ನೋಡಿದಾಗ ಅಲ್ಲಿ 5 ಗುಂಡಿಗಳಿದ್ದವು. ಅವುಗಳಲ್ಲಿ ಆಗಷ್ಟೇ ಗಿಡಗಳನ್ನು ಕಿತ್ತ ಗುರುತಿತ್ತು. ಸದರಿ ಸ್ಥಳ ಯಾವುದರ ವ್ಯಾಪ್ತಿಗೆ ಬರುತ್ತದೆ ಎಂದು ದಿಶಾಂತ್ ಆಪ್ ಮೂಲಕ ತಪಾಸಣೆ ಮಾಡಿದಾಗ ಅದು ಇನ್ನೂ ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಇದೆ ಎಂದು ತಿಳಿಯಿತು. ಸದರಿ ಸ್ಥಳದ ಅಕ್ಕ ಪಕ್ಕದಲ್ಲಿ ಯಾರ, ಯಾರ ಸ್ಥಳ ಬರುತ್ತದೆ ಎಂದು ತಿಳಿದುಕೊಂಡೆವು. ಆ ಸಂದರ್ಭದಲ್ಲಿ ತನಿಖಾಧಿಕಾರಿ ಪಂಚನಾಮೆಯನ್ನು ಮಾಡಿದರು. ಸದರಿ ಪಂಚನಾಮೆಯನ್ನು ಈಗ ನೋಡಿದೆ. ಅದನ್ನು ನಿಶಾನೆ ಪಿ1 ಎಂದು, ಅದರಲ್ಲಿರುವ ನನ ಸಹಿಯನ್ನು ನಿಶಾನೆ ಪಿ1(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಸಂಜೆ 6.15 ರಿಂದ 7.15-7.30

ರವರೆಗೆ ಮಾಡಿದರು. ಆ ಸಂದರ್ಭದಲ್ಲಿ ಸದರಿ ಸ್ಥಳದಲ್ಲಿ ಭಾವಚಿತ್ರಗಳನ್ನು ಪೋಲೀಸರು ತೆಗೆದರು. ಸದರಿ 5 ಗಿಡಗಳು ಬೇರುಸಮೇತ ಇದ್ದವು. ಆ ಸಂದರ್ಭದಲ್ಲಿ ಸದರಿ ಸ್ಥಳದಲ್ಲಿ ಚಾ.ಸಾ.2, ನಾನು, ಚಾ.ಸಾ.4, ಆರೋಪಿತ ಮತ್ತು ಪೋಲೀಸರು ಇದ್ದೆವು. ಪಂಚನಾಮೆಯಾದ ನಂತರ ಆರೋಪಿತನನ್ನು ಹಾಗೂ ವಶಪಡಿಸಿಕೊಂಡ ವಸ್ತುಗಳನ್ನು ತನಿಖಾಧಿಕಾರಿ ಠಾಣೆಗೆ ಕರೆತಂದರು. ನಾವು ವಾಪಸ್ ನಮ್ಮ ಕಚೇರಿಗೆ ಹೋದೆವು. ಆ ಸಂದರ್ಭದಲ್ಲಿ ವಶಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಪಿ.ಪಿ.ಯವರ ಕೋರಿಕೆಯ ಮೇರೆಗೆ ಉಳಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು).**

**(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು

ಸಾಕ್ಷಿಯನ್ನು ಪುನಃ ದಿ.**6.6.2023** ರಂದು ಕರೆಯಿಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

**4.** ನಾವು ಘಟನೆ ನಡೆದ ಸ್ಥಳಕ್ಕೆ ಹೋಗುವ ಮೊದಲು ನಮಗೆ ನೋಟೀಸನ್ನು ತನಿಖಾಧಿಕಾರಿ ಕೊಟ್ಟಿದ್ದರು. ಸದರಿ ನೋಟೀಸನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗ ನೋಡಿದೆ. ಅದನ್ನು ನಿಶಾನೆ ಪಿ**2** ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ**2**(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಸಿಡಿ ಕರಪ್ಟ್ ಆಗಿರುವ ಕಾರಣ ಅದರಲ್ಲಿ ಈ ಪ್ರಕರಣದಲ್ಲಿ ಹಾಜರುಪಡಿಸಿರುವ ಭಾವಚಿತ್ರಗಳ ಅಂಶಗಳು ಕಾಣದೇ ಇರುವ ಕಾರಣ ಮಾನ್ಯ ಪಿ.ಪಿ.ಯವರ ಕೋರಿಕೆಯ ಮೇರೆಗೆ ಉಳಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

**(**ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು**).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು

ಈಗ ಕರಪ್ಟ್ ಆಗಿಲ್ಲದೇ ಇರುವ ಸರಿಯಾದ ಸಿಡಿಯಲ್ಲಿ ಈ ಪ್ರಕರಣಕ್ಕೆ ಸಂಬಂಧಪಟ್ಟ ಭಾವಚಿತ್ರಗಳನ್ನು ಒಳಗೊಂಡಿರುವ ಸಿಡಿಯನ್ನು ಹಾಜರುಪಡಿಸಿದ ನಂತರ ಸಾಕ್ಷಿಯನ್ನು ಪುನಃ ದಿ.**23.8.2023** ರಂದು ಕರೆಯಿಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

(ಈಗ ಮಾನ್ಯ ಪಿಪಿ ಯವರ ಕೋರಿಕೆಯ ಮೇರೆಗೆ ಆರೋಪಿತರ ಪರ ವಕೀಲರ ಸಮಕ್ಷಮ ನ್ಯಾಯಾಲಯವು ಸಿಡಿಯನ್ನು ಕಂಪ್ಯೂಟರಿಗೆ ಹಾಕಿ ಪರಿಶೀಲನೆ ಮಾಡಲಾಯಿತು. ಸಿಡಿಯಲ್ಲಿ ಒಟ್ಟು 33 ಭಾವಚಿತ್ರಗಳು ಮತ್ತು ಒಂದು ವಿಡಿಯೋ ಕಂಡುಬರುತ್ತವೆ).

5. ಸದರಿ ಸಿಡಿಯನ್ನು ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65-ಬಿ ದೃಢೀಕರಣ ಪತ್ರವನ್ನು ಹಾಜರುಪಡಿಸುವ ನಿಬಂಧನೆಯೊಂದಿಗೆ ನಿಶಾನೆ ಪಿ3 ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ತೆಗೆದ 20 ಭಾವಚಿತ್ರಗಳನ್ನು ಈಗ ನೋಡಿದೆ. ಅವುಗಳನ್ನು ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65-ಬಿ ದೃಢೀಕರಣ ಪತ್ರವನ್ನು ಹಾಜರುಪಡಿಸುವ ನಿಬಂಧನೆಯೊಂದಿಗೆ ನಿಶಾನೆ ಪಿ4 ರಿಂದ 23 ಎಂದು ಗುರುತಿಸಲಾಯಿತು. ನಿಶಾನೆ ಪಿ4 ಭಾವಚಿತ್ರದಲ್ಲಿ ಕಿತ್ತಳೆ ಬಣ್ಣದ ಅಂಗಿ ಧರಿಸಿರುವ ವ್ಯಕ್ತಿ ನಾನು.
6. ಆರೋಪಿತನ ಬಳಿ ಇದ್ದ 5 ಗಿಡಗಳನ್ನು ಎಲ್ಲಿಂದ ತಂದೆ ಎಂದು ತನಿಖಾಧಿಕಾರಿ ಆರೋಪಿತನಿಗೆ ಕೇಳಿದಾಗ ತನ್ನ ತೋಟದಿಂದ ಆಗಷ್ಟೇ ಕಿತ್ತುಕೊಂಡು ತಂದಿದ್ದಾಗಿ ಹೇಳಿದ್ದನು. ತದನಂತರ ಆರೋಪಿತ ತಾನು ಸದರಿ ಗಿಡಗಳನ್ನು ಬೆಳೆದ ತನ್ನ ತೋಟಕ್ಕೆ ಕರೆದುಕೊಂಡು ಹೋಗಿ ತೋರಿಸಿದನು. ಪಂಚನಾಮೆ ಸಂದರ್ಭದಲ್ಲಿ ನೋಡಿದ 5 ಗಾಂಜಾ ಗಿಡಗಳನ್ನು ತನಿಖಾಧಿಕಾರಿ ತಮ್ಮ ವಶಕ್ಕೆ ಪಡೆದುಕೊಂಡರು.

**ಪಾಟೀ ಸವಾಲು ಶ್ರೀ.ಕೆ.ಎಸ್.ಎ.ವಕೀಲರಿಂದ ಆರೋಪಿತನ ಪರವಾಗಿ :**

(ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು

ಸಾಕ್ಷಿಯನ್ನು ಪುನಃ ದಿ.**19.12.2023** ರಂದು ಕರೆಯಿಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು ಶ್ರೀ.ಟಿ.ಎಸ್.ಕೃಷ್ಣಶಾಸ್ತ್ರಿ ವಕೀಲರಿಂದ ಆರೋಪಿತನ ಪರವಾಗಿ :**

**7.** ಮಹಜರಿಗೆ ಸಹಕರಿಸಲು ಗ್ರಾಮಾಂತರ ಪೋಲೀಸ್ ಠಾಣೆಯಿಂದ ಬಂದ ಮನವಿ ಪತ್ರ ತಹಸೀಲ್ದಾರ್ ಕೈಯಲ್ಲಿತ್ತು. ಪಂಚರಾಗಿ ಸಹಕರಿಸಲು ನನಗೆ ಪ್ರತ್ಯೇಕವಾದ ನೋಟೀಸನ್ನು ಕೊಟ್ಟಿಲ್ಲ. ಮನವಿ ಬಂದ ನಂತರ ಸಾಯಂಕಾಲ 5 ಗಂಟೆಗೆ ತಹಸೀಲ್ದಾರ್ ರವರು ನನ್ನನ್ನು ಕರೆದುಕೊಂಡು ಹೋದರು. ತಹಸೀಲ್ದಾರ್ ರವರಿಗೆ ಮನವಿ ಎಷ್ಟು ಹೊತ್ತಿಗೆ ಬಂದಿತ್ತು ಎಂದು ಗೊತ್ತಿದೆ. ನಾನು, ತಹಸೀಲ್ದಾರ್, ಪಂಚ ಸಾಕ್ಷಿ ಚೇತನ್ ಶಿವು ಮತ್ತು ಚಾಲಕ ಒಟ್ಟಿಗೆ ಹೋಗಿದ್ದೆವು. ಎಲ್ಲಿಗೆ ಹೋಗಬೇಕು ಎಂದು ನಮಗೆ ಗೊತ್ತಿತ್ತು. ಪೋಲೀಸ್ ನವರು ಇಂತಹದ್ದೇ ಜಾಗಕ್ಕೆ ಬರಬೇಕೆಂದು ಹೇಳಿದ್ದರು. ತಹಸೀಲ್ದಾರ್ ಕಚೇರಿಯಿಂದ ನಾವು ಹೋದಂತಹ ಸ್ಥಳ ಸುಮಾರು 20 ಕಿ ಮೀ ಒಳಗಡೆ ದೂರ ಇತ್ತು. ಆ ಸ್ಥಳ ಕೋರಾ ಕಂದಾಯ ವ್ಯಾಪ್ತಿ ಮತ್ತು ಕೋರಾ ಪೋಲೀಸ್ ಠಾಣಾ ವ್ಯಾಪ್ತಿಗೆ ಬರುವಂತಹ ಸ್ಥಳ. ಈ ವಿಚಾರ ನಮ್ಮ ತಹಸೀಲ್ದಾರ್ ರವರಿಗೆ ಗೊತ್ತಿತ್ತು. ಗ್ರಾಮಾಂತರ ಪೋಲೀಸರು ಮನವಿ ಕೊಟ್ಟಾಗ ಆ ಸ್ಥಳ ಗ್ರಾಮಾಂತರ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ಹೇಳಿರುವುದಿಲ್ಲ. ಸದರಿ ಸ್ಥಳ ಕೋರಾ ಕಂದಾಯ ವ್ಯಾಪ್ತಿ ಮತ್ತು ಕೋರಾ ಪೋಲೀಸ್ ಠಾಣಾ ವ್ಯಾಪ್ತಿಗೆ ಬರುತ್ತಿದೆಯೇ ಎಂದು ನಾನು ದೃಢಪಡಿಸಿಲ್ಲ, ತಹಸೀಲ್ದಾರ್ ದೃಢಪಡಿಸಿರಬಹುದು. ನಮ್ಮ ಕಚೇರಿಗೆ ಸದರಿ ದೂರಿನ ಪ್ರತಿ ಬಂದಿತ್ತು. ಸದರಿ ದೂರಿನ ಪ್ರತಿ ಸ್ಥಳಕ್ಕೆ ಹೋಗುವಾಗ ತಹಸೀಲ್ದಾರ್ ಕೈಯಲ್ಲಿತ್ತು. ಸ್ಥಳಕ್ಕೆ ಹೋದಾಗ ದೂರುದಾರ ಬಂದು ನಮ್ಮ ಹತ್ತಿರ ವಿಚಾರಣೆ ಮಾಡಿಲ್ಲ. ನಾವು ಅಲ್ಲಿಗೆ ಹೋದಾಗ ಆರೋಪಿ ದೊಡ್ಡತಿಮ್ಮಯ್ಯ ಒಬ್ಬರೇ ಇದ್ದರು. ಪೋಲೀಸರು ಮತ್ತು ನಾವು ಒಂದೇ ಸಮಯಕ್ಕೆ ಸ್ಥಳಕ್ಕೆ ಹೋಗಿದ್ದೆವು. ನಾವು ಸ್ಥಳಕ್ಕೆ ಹೋದಾಗ ಆರೋಪಿ ದೊಡ್ಡತಿಮ್ಮಯ್ಯ ಅವರ ಮನೆಯ ಸ್ವಲ್ಪ ಮುಂದೆ ನಿಂತಿದ್ದರು. ನಾವು ಹೋದಾಗ ದೊಡ್ಡತಿಮ್ಮಯ್ಯ ಒಬ್ಬರೇ ಇದ್ದರು. ನಮ್ಮ ಜೊತೆ ಪೋಲೀಸರು 3-4 ಮಂದಿ ಬಂದಿದ್ದರು. ಆರೋಪಿ ನಿಂತಿದ್ದ ಜಾಗದ ಸುತ್ತ ಗಿಡಗಳು ಇದ್ದವು. ಆರೋಪಿ ನಿಂತಿದ್ದ ಅವರ ಮನೆಗೆ ಟಾರ್ ರಸ್ತೆಯಿಂದ 20-30 ಮೀಟರ್ ದೂರ ಇತ್ತು. ಟಾರ್ ರಸ್ತೆಯಿಂದ ಆರೋಪಿಯ ಮನೆ 10 ಅಡಿ ದೂರದಲ್ಲಿ ದಕ್ಷಿಣಕ್ಕೆ ಮುಖ ಮಾಡಿಕೊಂಡು ಇದೆ, ಮನೆ ಪೂರ್ವಕ್ಕೆ ಮುಖ

ಮಾಡಿಕೊಂಡು ಇದೆ ಎಂದರೆ ದಿಕ್ಕು ಮತ್ತು ದೂರದ ಬಗ್ಗೆ ನಿಖರವಾಗಿ ಹೇಳಲಾಗುವುದಿಲ್ಲ. ನಾವು ಸ್ಥಳಕ್ಕೆ ಹೋದಾಗ ಸಂಜೆ **6.15-6.30** ಗಂಟೆಯಾಗಿತ್ತು. ನಾವು ಹೋದಾಗ ಆರೋಪಿಯ ಅಂಗಡಿಯ ಎದುರುಗಡೆ ಗಿರಾಕಿಗಳು ಇದ್ದರು ಎಂದರೆ ಸರಿಯಲ್ಲ. ಆರೋಪಿಯ ಮನೆಯಲ್ಲಿ ಆರೋಪಿಯ ಹೆಂಡತಿ, ಮಗ, ಸೊಸೆ, ಮಗನ ಮಕ್ಕಳು ಇದ್ದರು ಎಂದರೆ ನಿಜ. ನಾವು ಹೋಗಿ ಆರೋಪಿಯ ಅಂಗಡಿ ಮನೆಯಲ್ಲಿ ವಿಚಾರ ಮಾಡಿದೆವು ಎಂದರೆ ಸರಿಯಲ್ಲ. ಅಲ್ಲಿ ಆರೋಪಿಯ ಅಂಗಡಿಯೇ ಇರಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆರೋಪಿಯ ಮನೆಯಿಂದ **15** ಅಡಿ ದೂರದಲ್ಲಿ ಪೂರ್ವಕ್ಕೆ ಒಂದು ಈಶ್ವರ ದೇವಸ್ಥಾನ ಇದೆ ಎಂದರೆ ಇರಬಹುದು, ನಾನು ನೋಡಿಲ್ಲ. ಈಶ್ವರ ದೇವಸ್ಥಾನದಿಂದ ಸ್ವಲ್ಪ ದೂರದಲ್ಲಿ ಮಲ್ಲಪ್ಪನ ಪಾಳುಬಿದ್ದ ಮನೆ ಇದೆ ಎಂದರೆ ನಾನು ನೋಡಿಲ್ಲ. ಆರೋಪಿಯ ತೋಟದಿಂದ ಸ್ವಲ್ಪ ದೂರದಲ್ಲಿ ಅಂದರೆ **2-3** ಅಡಿ ದೂರದಲ್ಲಿ ರಂಗಧಾಮಯ್ಯನವರ ಹೊಸ ಮನೆ ಇದೆ ಎಂದರೆ ನನಗೆ ಗೊತ್ತಿಲ್ಲ. ರಂಗಧಾಮಯ್ಯನ ಮನೆಯಲ್ಲಿ ನಾವಾಗಲೀ, ಪೋಲೀಸರಾಗಲೀ ವಿಚಾರಣೆ ಮಾಡಿಲ್ಲ. ಈ ಸಾಕ್ಷಿ ಪೋಲೀಸರ ಹೇಳಿಕೆ ಮೇರೆಗೆ ಸಾಕ್ಷಿ ಕೊಟ್ಟಿದ್ದೇನೆ ಎಂದರೆ ನಾವು ಏನು ನೋಡಿದ್ದೇವೋ ಅದನ್ನು ಸಾಕ್ಷಿ ಹೇಳಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ಪೋಲೀಸರು ಏನು ಹೇಳಿದ್ದಾರೋ ಮತ್ತು ನಾವು ಸ್ಥಳದಲ್ಲಿ ಏನು ನೋಡಿದ್ದೇವೋ ಅದನ್ನು ಸಾಕ್ಷಿಯಲ್ಲಿ ಹೇಳಿದ್ದೇನೆ ಎಂದರೆ ನಿಜ.

**8.** ನಾವು ಮತ್ತು ಪೋಲೀಸರು ಜೊತೆಯಾಗಿ ಆರೋಪಿ ನಿಂತಿದ್ದ ಜಾಗಕ್ಕೆ ಹೋದೆವು. ನಾವು ಹೋದ ನಂತರ ಆರೋಪಿಗೆ ವಿಚಾರಣೆ ಮಾಡಿದರು. ತನಿಖೆಯನ್ನು ಪೋಲೀಸರು ಮಾಡಿದರು. ಅಂಗ ಜಪ್ತಿ ಮಾಡಲು ತಹಸೀಲ್ದಾರ್ ಯಾರಿಗೆ ಅಧಿಕಾರ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ನಾವು ಹೋಗುವ ಮೊದಲು ಏನು ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನಾವು ಹೋದಾಗ ಆರೋಪಿ ಟೊಮ್ಯಾಟೋ ಹಣ್ಣುಗಳನ್ನು ಬಾಕ್ಸಿಗೆ ಹಾಕುತ್ತಿದ್ದುದನ್ನು ನಾನು ನೋಡಿಲ್ಲ. ನಾವು ಹೋದಾಗ ಆರೋಪಿಯ ಮನೆಯ ಮುಂದೆ ಟೊಮ್ಯಾಟೋ ಹಾಕುವ ಬಾಕ್ಸ್ ಗಳು ಇದ್ದವು. ಅದರ ಒಳಗಡೆ ಟೊಮ್ಯಾಟೋ ಇತ್ತೋ ಇಲ್ಲವೋ ನಾನು ನೋಡಿಲ್ಲ. ನಾವು ಹೋದಾಗ ಬದಿಯಲ್ಲಿ ಟೊಮ್ಯಾಟೋಗಳು **50-60** ಬಿದ್ದಿದ್ದವು. ಆರೋಪಿಯ ತೋಟದಲ್ಲಿ ಹುರುಳಿಕಾಯಿ ಮತ್ತು ಟೊಮ್ಯಾಟೋ ಬೆಳೆದಿದ್ದು ಕಂಡುಬಂತು.ಅವುಗಳನ್ನು ಬಿಡಿಸಿಕೊಂಡು ಬಂದು ಆರೋಪಿ ಬಾಕ್ಸ್ ಗಳಿಗೆ ಹಾಕುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ.

9. ಪೋಲೀಸರು ಸಮವಸ್ತ್ರದಲ್ಲಿ ಇದ್ದರು. ಆರೋಪಿಯ ಮನೆಯ ಮುಂದೆ ಆತನ ಕೈಯಲ್ಲಿದ್ದ ಚೀಲ ನೋಡಿ, ವಿಚಾರಿಸಿ, ತೋಟಕ್ಕೆ ಹೋಗಿ, ನಂತರ ಮಹಜರ್ ಮಾಡಿದರು. ಆರೋಪಿಯ ಕೈಯಲ್ಲಿದ್ದ ಚೀಲವನ್ನು ಏನು ಮಾಡಿದರು ಎಂದು ನನಗೆ ಗೊತ್ತಿಲ್ಲ. ಚೀಲವನ್ನು ಜಪ್ತು ಪಡಿಸಬೇಕಾದರೆ ಪೋಲೀಸರು ಗುರುತು ಹಾಕಿದರು. ಆರೋಪಿಯ ಕೈಯಲ್ಲಿ ಪ್ಲಾಸ್ಟಿಕ್ ಚೀಲ ಇತ್ತು. ಅದರ ಉದ್ದ, ಅಗಲ ಎತ್ತರ ನಿಖರವಾಗಿ ಹೇಳಲಾಗುವುದಿಲ್ಲ. ಅದರ ಅಳತೆಯನ್ನು ಮಹಜರಿನಲ್ಲಿ ಬರೆಸಿಲ್ಲ. ಮನೆ ಹತ್ತಿರ ನಿಂತಿದ್ದ ಆರೋಪಿಯನ್ನು ವಿಚಾರಣೆ ಮಾಡಲು ಸುಮಾರು ಒಂದು-ಒಂದೂವರೆ ಗಂಟೆ ಬೇಕಾಯಿತು. ಒಂದು-ಒಂದೂವರೆ ಗಂಟೆ ವಿಚಾರಣೆಯಾದ ನಂತರ ಆರೋಪಿಯನ್ನು ಕರೆದುಕೊಂಡು ಹೋದರು. ಆರೋಪಿಯನ್ನು ದಸ್ತಗಿರಿ ಮಾಡಬೇಕೆಂದು ಪೋಲೀಸರು ಕರೆದುಕೊಂಡು ಹೋದರು. ಎಲ್ಲಿಗೆ ಕರೆದುಕೊಂಡು ಹೋದರು ಎಂದು ನನಗೆ ಗೊತ್ತಿಲ್ಲ. ಮಹಜರನ್ನು ಪೋಲೀಸರು ಬರೆದರು. ಮಹಜರನ್ನು ಪೋಲೀಸರೇ ಹೇಳಿ ಬರೆಸಿದರು. ತಹಸೀಲ್ದಾರ್ ರವರು ಆರೋಪಿಯನ್ನು ವಿಚಾರಣೆ ಮಾಡುತ್ತಿದ್ದರು. ಪೋಲೀಸರು ಮತ್ತು ತಹಸೀಲ್ದಾರ್ ರವರು ಒಟ್ಟಿಗೆ ವಿಚಾರಣೆ ಮಾಡಿದರು. ಪೋಲೀಸರು ಮತ್ತು ತಹಸೀಲ್ದಾರ್ ರವರು ಎಷ್ಟು, ಎಷ್ಟು ಹೊತ್ತು ವಿಚಾರಣೆ ಮಾಡಿದರು ಎಂದು ನಿಖರವಾಗಿ ಹೇಳಲಾಗುವುದಿಲ್ಲ. ನಾವು ಅಲ್ಲಿ ವಿಚಾರಣೆ ಮಾಡಬೇಕಾದರೆ ರಾತ್ರಿ 8.30 ಗಂಟೆಯಾಗಿತ್ತು ಎಂದರೆ ಸರಿಯಲ್ಲ, ಕತ್ತಲಾಗಿತ್ತು. ಪೋಲೀಸರು ಬರವಣಿಗೆ ಮಾಡುತ್ತಿದ್ದರು. ಬರವಣಿಗೆಯನ್ನು ಬೆರಳಚ್ಚು ಮಾಡಲಾಯಿತು. ಆರೋಪಿಯ ಮನೆಯ ಹತ್ತಿರ ಕೂತು ಬೆರಳಚ್ಚು ಮಾಡಲಾಯಿತು. ಅದೇ ಸ್ಥಳದಲ್ಲಿ ಪ್ರಿಂಟರ್ ಮೂಲಕ ಪ್ರಿಂಟ್ ತೆಗೆಯಲಾಯಿತು. ಪೋಲೀಸರೇ ಸೀಲು, ಅರಗು ತಂದಿದ್ದರು. ಅರಗು ಮತ್ತು ಸೀಲ್ ಪೋಲೀಸರ ಹತ್ತಿರ ಇದ್ದವು. ಕತ್ತಲಾಗಿದ್ದರಿಂದ ತೋಟದಲ್ಲಿ ಏನೂ ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ಮುಸ್ಸಂಜೆಯಾಗಿತ್ತು. ರಸ್ತೆಯಿಂದ ತೋಟಕ್ಕೆ ಎಷ್ಟು ದೂರ ಆಗುತ್ತದೆ ಎಂದು ಅಳತೆ ಮಾಡಿಲ್ಲ.

10. ಈಶ್ವರ ದೇವಸ್ಥಾನದ ಹಿಂದುಗಡೆ ಆಗ್ನೇಯ ದಿಕ್ಕಿಗೆ ಮಣ್ಣಿನ ರಾಶಿ ಹಾಕಿತ್ತು ಎಂದರೆ ನಾನು ನೋಡಿಲ್ಲ. ಗಾಂಜಾ ಗಿಡ ಎಲ್ಲಿತ್ತು, ಯಾರು ತಂದರು ಎಂದರೆ ಆರೋಪಿಯ ಕೈಯಲ್ಲಿತ್ತು ಎಂದು ಸಾಕ್ಷಿ ಹೇಳುತ್ತಾರೆ. ನಾನು ಸ್ಥಳಕ್ಕೆ ಹೋಗುವ ಮೊದಲು ಯಾವುದೇ ಪೋಲೀಸರು ಸ್ಥಳದಲ್ಲಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮಹಜರ್ 2-3 ಪುಟಗಳಷ್ಟು ಬೆರಳಚ್ಚು ಮಾಡಿದರು. ಮಹಜರ್ ಮಾಡಿದ ಸ್ಥಳದ

ಚಕ್ಕುಬಂದಿ ಹೇಳಲಾಗುವುದಿಲ್ಲ. ಆರೋಪಿ ಮನೆಯ ಎದುರು ನಿಂತಿದ್ದಾರೆ ಎಂದು ವಿಚಾರ ಗೊತ್ತಿರಲಿಲ್ಲ, ಆದರೆ ಆತ ಅಲ್ಲಿ ಇದ್ದಾನೆಂದು ಗೊತ್ತಿತ್ತು. ನಾವು ಎರಡು ವಾಹನಗಳನ್ನು ಟಾರ್ ರಸ್ತೆಯಲ್ಲಿ ನಿಲ್ಲಿಸಿದ್ದೆವು. ಆ ರಸ್ತೆಯಿಂದ ಆರೋಪಿಯ ಮನೆಗೆ ಹೋಗಲು ರಸ್ತೆ ಇಲ್ಲ, ಓಡಾಡಲು ದಾರಿ ಇದೆ. ಆರೋಪಿಯ ಮನೆಗೆ ತೋಟ ದಾಟಿ ಹೋಗಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ರಸ್ತೆಯಿಂದ ತೋಟದ ಬದುವಿನಿಂದ ಹೋಗಿ ಮನೆಗೆ ಹೋಗಿದ್ದು ಎಂದು.

11. ಆರೋಪಿಯ ಕೈಯಲ್ಲಿ ಯಾವುದೇ ಗಾಂಜಾ ಗಿಡಗಳು ಇರಲಿಲ್ಲ, ಪೋಲೀಸರು ಹುಟ್ಟು ಹಾಕಿದ ಸುಳ್ಳು ಕೇಸಿಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯ ಪ್ಯಾರಾ 3 ರಲ್ಲಿ ಎಲ್ಲಾ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನೋಟೀಸನ್ನು ನಮ್ಮ ಕಚೇರಿಯಲ್ಲಿ ಕೊಟ್ಟರು. ತಹಸೀಲ್ದಾರ್ ಕೊಟ್ಟರು. ಫೋಟೋಗಳನ್ನು ನನ್ನ ಮುಂದೆ ತೆಗೆದಿದ್ದರು. ನಾನು ಮುಖ್ಯ ವಿಚಾರಣೆಯ ಪ್ಯಾರಾ 5 ಮತ್ತು 6 ರಲ್ಲಿ ಎಲ್ಲಾ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಸರ್ಕಾರಿ ನೌಕರನಾಗಿರುವುದರಿಂದ ಪೋಲೀಸರಿಗೆ ಸಹಕರಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

**(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು